

‘ತೊಲೆ ಕೆಳಗೆ ಮನಿಕೆಬೇಡ ಅಮ್ತ ಸಾವ್ರ ಸಲ ಹೇಳಿದಿನಿ, ಆದ್ರೂ ಅಲ್ಲೇ ಮಕ್ಕಮ್ತಿಯಲ್ಲಮ್ಮಣಿ, ಸ್ವಪ್ನ ಬೀಳ್ತವೆ, ಅದ್ರಡೆಲಿ ಮನಿಕ್ಯಬೇಡ ಅಮ್ತ ಹೇಳ್ತಿನ ತಿರ್ಗ ಅಲ್ಲೇ ಮಕ್ಕಮ್ತೀಯ’ ಎಂದು ಬೈಯುವ ಧಾಟಿಯಲ್ಲಿ ಲಕ್ಕಮ್ಮ ಮಗಳು ಚುಕ್ಕಿಗೆ ಹೇಳಿದಳು. ಚುಕ್ಕಿಗೆ ಹಗಲು ಮಲಗಿಕೊಂಡರೂ ಕನಸುಗಳು ಬೀಳುತ್ತವೆ ಮತ್ತು ರಾತ್ರಿಯ ಹೊತ್ತೂ ಸಹ ಬೀಳುತ್ತವೆ. ಅವಳಿಗೆ ಕನಸುಗಳು ಬೀಳಲು ಹೊತ್ತು ಗೊತ್ತು ಎನ್ನುವುದು ಇಲ್ಲ. ಆದರೆ, ಈಗ ಚುಕ್ಕಿ ಮಲಗಿದ್ದವಳು, ಸಡನ್ನಾಗಿ ಎದ್ದು ಕುಳಿತದ್ದು ಕನಸು ಬಿದ್ದದ್ದಕ್ಕೆ ಅಲ್ಲ. ಅವಳಿಗೆ ಯಾವ ಕನಸೂ ಬಿದ್ದಿರಲಿಲ್ಲ. ಆದರೂ ಅವಳು ಮಲಗಿದ್ದು ಮಾತ್ರ ತೊಲೆಯ ಕೆಳಗಡೆ. ಈಚಲು ಚಾಪೆಯ ಮೇಲೆ. ದೀಪಾವಳಿ ಹಬ್ಬಕ್ಕೆ ಮನೆಯನ್ನು ಸ್ವಚ್ಛಗೊಳಿಸಿ, ಸುಣ್ಣಬಣ್ಣವನ್ನು ಬಳಿದು ಒಪ್ಪ ಓರಣಮಾಡಲಾಗಿತ್ತು. ಮಾಳಿಗೆಯನ್ನು ಸಪೋರ್ಟಾಗಿ ಹಿಡಿದು ನಿಂತಿರುವ ಕಂಬಗಳಿಗೆ ಮತ್ತು ತೊಲೆ, ಜಂತೆಗಳಿಗೆ ಹುರಮಂಜನ್ನು ಬಳಿಯಲಾಗಿತ್ತು. ತೊಲೆ ಮತ್ತು ಜಂತೆಗಳಿಗೆ ತಲೆದಿಂಬಿನ ಮೇಲೆ ಬಣ್ಣದ ರಂಗೋಲಿಗಳನ್ನು ಒಯ್ದು, ಅದನ್ನು ಹಾಗೇ ಅವುಗಳಿಗೆ ಬಳಿದಿದ್ದ ಹಸಿ ಹುರಮಂಜಿನ ಮೇಲೆ ಒತ್ತಿ ಅಂಟಿಸಲಾಗಿತ್ತು. ಹಾಗಾಗಿ, ಆ ಬಣ್ಣದ ರಂಗೋಲಿಗಳು ಮನೆಯ ಒಳಗೆ ಬಂದು ಯಾರಾದರೂ ಮೇಲಕ್ಕೆ ತಲೆ ಎತ್ತಿ ನೋಡಿದರೆ ಒಂದು ಚಂದ ಕಾಣುತ್ತಿತ್ತು. ಮರಮಟ್ಟಿನ ಅವು ಜೀವಕಳೆಯಿಂದ ಮೆರುಗನ್ನು ಪಡೆದಿದ್ದವು. ತಲೆದಿಂಬಿನಿಂದ ಅವುಗಳನ್ನು ಒತ್ತಿರುವುದು ಗೊತ್ತಿಲ್ಲದವರಿಗೆ ಕೆಳ ಮುಖವಾಗಿ ಅಲ್ಲಿ ಆ ಥರದ ಬಣ್ಣದ ರಂಗೋಲಿಗಳನ್ನು ಹೇಗೆ ಬಿಡಿಸಿದ್ದಾರಪ್ಪ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡು ಸೋಜಿಗಪಡುವಂತೆ ಮಾಡುತ್ತಿದ್ದವು. ಅಲ್ಲಿದ್ದ ಅನೇಕ ಬಗೆಯ ರಂಗೋಲಿಗಳಲ್ಲಿ ಒಂದೊಂದು ಒಂದು ಬಗೆಯಲ್ಲಿದ್ದವು. ಅವುಗಳಲ್ಲಿ ವೃತ್ತಾಕಾರದ ರಂಗೋಲಿಯೊಂದು ಪಕ್ಷಿಯಿಂದ ಕೊನೆಯಾಗಿತ್ತು.

ತೊಲೆಯ ಕೆಳಗೆ ಅಂಗಾತ ಮಲಗಿದ್ದ ಚುಕ್ಕಿ ಮಟ ಮಟ ಮಧ್ಯಾಹ್ನದಲ್ಲಿ ಊಟ ಮಾಡಿ ಹಾಗೆ ಮೂಲೆಯಲ್ಲಿ ಬೆಳಗಿನಿಂದ ನಿಂತಿದ್ದ ಈಚಲು ಚಾಪೆಯನ್ನು ಹಾಸಿ ದಿಂಬಿಗೆ ತಲೆಯನ್ನು ಕೊಟ್ಟಿದ್ದಳು. ನಿದ್ರೆ ಮಾತ್ರ ಹತ್ತಿರಲಿಲ್ಲ. ಅಂಗಾತ ಮಲಗಿದ್ದ ಚುಕ್ಕಿ ಬಣ್ಣದ ರಂಗೋಲಿಗಳನ್ನು ನೋಡುತ್ತ, ನೋಡುತ್ತ, ಭ್ರಮೆಗೊಂಡು, ಅದರಲ್ಲಿನ ಪಕ್ಷಿ ಪಟಪಟ ರೆಕ್ಕೆ ಬಡಿದುಕೊಂಡು ಹಾರಿಹೋಗುವುದ ಕಂಡಿದ್ದಳು. ಆಗ ಅದನ್ನು ಹಿಡಿದುಕೊಳ್ಳಲು ರಪ್ಪಂತ ಸಡನ್ನಾಗಿ ಎದ್ದು ಕುಳಿತಿದ್ದಳು. ಅವಳ ಅಮ್ಮ ಲಕ್ಕಮ್ಮ ಬಾಗಿಲ ಬಳಿ ಬೆಳಕಲ್ಲಿ ಕುಳಿತು ಹತ್ತಿಯ ಅರಳೆಯಿಂದ ಬತ್ತಿಯನ್ನು ಹೊಸೆಯುವಾಗ, ಮಗಳು ಹಾಗೆ ಎದ್ದದ್ದನ್ನು